ಕರ್ನಾಟಕ ಸರ್ಕಾರ

***ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.***

ಸಂಖ್ಯೆ: ಪಪೂಶಿಇ/ಶೈ.ಶಾ-4/ತರಬೇತಿ/ಅ.ಬಿ-1/2018-19 ದಿನಾಂಕ: 20-7-2018.

ಜ್ಞಾಪನ

**ವಿಷಯ:** 2018-19ನೇ ಶೈಕ್ಷಣಿಕ ಸಾಲಿಗೆ ಜುಲೈ ತಿಂಗಳಿನಲ್ಲಿ ನಡೆಯಲಿರುವ ಅರ್ಥಶಾಸ್ತ್ರ ವಿಷಯದ ತರಬೇತಿ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:** 1. ಸರ್ಕಾರದ ಅದೇಶ ಪತ್ರ ಸಂಖ್ಯೆ: ಇಡಿ 139 ಯೋಸಕ 2018, ಬೆಂಗಳೂರು, ದಿನಾಂಕ: 29-05-2018.

2. ಈ ಕಛೇರಿ ಜ್ಞಾಪನ ಸಂಖ್ಯೆ:ಪಪೂಶಿಇ/ಶೈಶಾ-04/*ತ.ಕಾ.ಖ/ಅ.ವಿ/*2018-19, ದಿನಾಂಕ: 17-07-2018.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆಯು 2018-19ನೇ ಸಾಲಿನಿಂದ ದ್ವಿತೀಯ ಪಿಯುಸಿ ತರಗತಿಗಳಿಗೆ ಅರ್ಥಶಾಸ್ತ್ರ ವಿಷಯವನ್ನು ಬೋಧಿಸುತ್ತಿರುವ ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ 07ದಿನಗಳ ಜಿಲ್ಲಾ/ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 30-07-2018 ರಿಂದ 05-08-2018 ರವರೆಗೆ ಹಮ್ಮಿಕೊಳ್ಳಲಾಗುತ್ತಿದೆ. ಉಲ್ಲೇಖ-02ರಲ್ಲಿ ತರಬೇತಿ ಕಾರ್ಯಕ್ರಮಗಳ ವೇಳಾಪಟ್ಟಿ, ಸಮಿತಿ ಮತ್ತು ಸಂಯೋಜಕರ ಜವಾಬ್ದಾರಿಗಳನ್ನೊಳಗೊಂಡಂತೆ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಬೇಗಾದ ಅನುದಾನಕ್ಕೆ ಖರ್ಚು ವೆಚ್ಚಗಳ ರೂಪರೇಷೆಗಳನ್ನು ನೀಡಲಾಗಿದೆ.

ಅದರಂತೆ ತರಬೇತಿ ಕಾರ್ಯಕ್ರಮಕ್ಕೆ ಪೆನ್/ಫೈಲ್/ಪ್ಯಾಡ್, ಕಾಫಿ/ಟೀ/ಬಿಸ್ಕಟ್ಸ್ / Working Lunch /ಕುಡಿಯುವ ನೀರು, ಸಂಪನ್ಮೂಲ ವ್ಯಕ್ತಿಗಳ ಸಂಬಾವನೆ, ಶಿಬಿರಾರ್ಥಿಗಳಿಗೆ/ ಸಂಪನ್ಮೂಲ ವ್ಯಕ್ತಿಗಳಿಗೆ/ ಸಂಯೋಜಕರಿಗೆ ಹಾಗೂ. ಉಪನ್ಯಾಸಕರುಗಳಿಗೆ KCSR ನಿಯಮಾನುಸಾರ ಪ್ರಯಾಣಭತ್ಯೆ, ದಿನಭತ್ಯೆ ಮತ್ತು ಸಾದಿಲ್ವಾರು ಸೇರಿ ಪಟ್ಟಿಯಲ್ಲಿರುವಂತೆ ಅನುದಾನವನ್ನು ವೆಚ್ಚ ಮಾಡಬೇಕಾಗಿರುತ್ತದೆ. ಜಿಲ್ಲೆಗಳ ತರಬೇತಿ ಕಾರ್ಯಕ್ರಮಕ್ಕಾಗಿ ವೆಚ್ಚ ಮಾಡಲಾಗುವ ಅನುದಾನವನ್ನು ಲೆಕ್ಕಶೀರ್ಷಿಕೆ: 2202-02-001-0-01-059 (ಇತರೆ ವೆಚ್ಚಗಳಲ್ಲಿ)ರಲ್ಲಿ ಒದಗಿಸಿರುವ ಅನುದಾನದಲ್ಲಿ ಬಳಸಿಕೊಳ್ಳಲು ಉಲ್ಲೇಖ-01ರ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ. ಸಂಬಂಧಿಸಿದಂತೆ ರಾಜ್ಯದ 29 ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಮೊದಲ ಕಂತಿನ ಅನುದಾನವಾಗಿ ರೂ 50,56,180/-(ರೂ ಐವತ್ತು ಲಕ್ಷದ ಐವತ್ತಾರು ಸಾವಿರದ, ಒಂದು ನೂರ ಎಂಭತ್ತು ಮಾತ್ರ) ಗಳನ್ನು ಹಂಚಿಕೆ ಮಾಡುವ ಕುರಿತು ಈ ಕೆಳಕಂಡಂತೆ ಆದೇಶಿಸಿದೆ.

***ಸದರಿ ತರಬೇತಿ ವಿಭಾಗ ಮಟ್ಟದಲ್ಲಿ ನಡೆದ ಕಾರ್ಯಕ್ರಮಕ್ಕೆ ಜಿಲ್ಲಾ ಉಪನಿರ್ದೇಶಕರುಗಳ ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಈ ಕೆಳಕಂಡಂತೆ ಮೊದಲ ಕಂತಿನ ಅನುದಾನ ಬಿಡುಗಡೆ ಮಾಡಲಾಗಿದೆ.***

| SI NO | Dist | Amount |
|---|---|---|
| 1 | Bangalore North (AN) + Bangalore Rural (BB) | 208880 |
| 2 | Bangalore South (AS) | 185380 |
| 3 | Ramnagar (BR) | 119060 |
| 4 | Bellary (CC) | 121880 |
| 5 | Belgaum (DD) | 183500 |

| | | |
|---|---|---|
| 6 | Bagalkot (EB) | 129400 |
| 7 | Vijipur (EE) | 183500 |
| 8 | Bidar(FF) | 112480 |
| 9 | Davangere(GD) | 220160 |
| 10 | Chitradurga (GG) | 220160 |
| 11 | Chikmaglur (HH) | 125640 |
| 12 | Gadag (JG) | 113420 |
| 13 | Haveri (JH) | 193840 |
| 14 | Dharwad (JJ) | 123760 |
| 15 | Gulbarga (KK), Yadgiri(KY) | 212640 |
| 16 | Hassan (LL) | 305280 |
| 17 | Chikkaballapur ( MC) | 107780 |
| 18 | Kolar (MM) | 115300 |
| 19 | Chamarajnagar (NC) | 104020 |
| 20 | Mysore (NN), Kodagu (VV) | 316560 |
| 21 | Mandya (PP) | 221100 |
| 22 | Karvar (QQ) | 123760 |
| 23 | Koppal (RK) | 104960 |
| 24 | Raichur (RR) | 103080 |
| 25 | Mangalore (SS) | 211700 |
| 26 | Udupi (SU) | 123760 |
| 27 | Shimoga (TT) | 208880 |
| 28 | Tumkur (UU) | 427060 |
| 29 | Chikodi | 116240 |
| | Resocurse person (UU) | 7000 |
| | Asst Resocurse person (AS) | 6000 |
| | Total | 5056180 |

** ಟಿಎಯನ್ನು ಕೆ.ಸಿ.ಎಸ್.ಆರ್. ನಿಯಮಾನುಸಾರ ನೀಡುವುದು..*

**ಆದೇಶ:**

2018–19ನೇ ಸಾಲಿನಲ್ಲಿ ಉಪನ್ಯಾಸಕರುಗಳಿಗೆ ಅರ್ಥಶಾಸ್ತ್ರ ವಿಷಯದಲ್ಲಿ 7ದಿನಗಳ (ಪ್ರತಿ ವಿಷಯ/ಬ್ಯಾಚ್‌ಗೆ 28 .ಅಧಿವೇಶನದಲ್ಲಿ) ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ/ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮಕ್ಕಾಗಿ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರುಗಳಿಗೆ ಶೈಕ್ಷಣಿಕ ಸುಧಾರಣೆಯ ಸಲುವಾಗಿ ಲೆಕ್ಕಶೀರ್ಷಿಕೆ: 2202–02–001–0–01–059 (ಇತರೆ ವೆಚ್ಚಗಳಲ್ಲಿ)ರಲ್ಲಿ ಒದಗಿಸಿರುವ ಅನುದಾನದಲ್ಲಿ ರಾಜ್ಯದ 29 ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಮೊದಲ ಕಂತಿನ ಅನುದಾನವಾಗಿ ರೂ 50,56,180/–(ರೂ ಐವತ್ತು ಲಕ್ಷದ ಐವತ್ತಾರು ಸಾವಿರದ, ಒಂದು ನೂರ ಎಂಭತ್ತು ಮಾತ್ರ) ಗಳನ್ನು ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡ *ಷರತ್ತುಗಳೊಂದಿಗೆ* ಆದೇಶಿಸಿದೆ.

1. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಜ್ಞಾಪನದಲ್ಲಿ ತಿಳಿಸಿರುವ ನಿಬಂಧನೆಗಳಂತೆ ತರಬೇತಿ ಕಾರ್ಯಕ್ರಮಗಳಿಗೆ ಮಾತ್ರ ವೆಚ್ಚ ಭರಿಸತಕ್ಕದ್ದು.
2. 7 ದಿನಗಳ ತರಬೇತಿ ಕಾರ್ಯಕ್ರಮಗಳ ವೆಚ್ಚಕ್ಕೆ ಸಂಬಂಧಿಸಿದ ವೋಚರ್ಸಗಳ ಪರಿಶೀಲನೆ ಮತ್ತು ಪಾವತಿ ಹೊಣೆಗಾರಿಕೆ ಜಿಲ್ಲಾಉಪನಿರ್ದೇಶಕರದೇ ಆಗಿರುತ್ತದೆ.
3. ಸದರಿ ತರಬೇತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಬಿಡುಗಡೆ ಮಾಡಿದ ಅನುದಾನವನ್ನು ಬಳಸಿಕೊಂಡು ಹೆಚ್ಚು ಅನುದಾನದ ಅಗತ್ಯವಿದ್ದಲ್ಲಿ, ಕೋರಿಕೆಯನ್ನು ತರಬೇತಿ ಕಾರ್ಯಕ್ರಮ ಮುಗಿದ ಮೂರು ದಿನಗಳ ಒಳಗಾಗಿ ಕ್ರಮ ಕೈಗೊಳ್ಳಲು ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ.
4. ತರಬೇತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮೊದಲ ಕಂತಿನ ಅನುದಾನದಲ್ಲಿ ವೆಚ್ಚ ಮಾಡಿರುವ ಅನುದಾನಕ್ಕೆ ಸಂಬಂಧಿಸಿದ ಬಿಲ್ಲುಗಳ ದೃಢೀಕೃತ ಪ್ರತಿಯನ್ನು ಕೋರಿಕಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
5. ಸದರಿ ತರಬೇತಿ ಕಾರ್ಯಕ್ರಮಕ್ಕೆ ಅಗತ್ಯವಿರುವ ಪಠ್ಯಪುಸ್ತಕಗಳನ್ನು ಜಿಲ್ಲೆಗಳಿಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ.
6. ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನದ ವೆಚ್ಚಕ್ಕೆ ಸಂಬಂಧಿಸಿದಂತೆ ಮಾಸಿಕ ಪ್ರಗತಿ ವರದಿಯನ್ನು **'ಲೆಕ್ಕಪತ್ರಾಧಿಕಾರಿಗಳು, ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012'.** ಇವರಿಗೆ ಸಲ್ಲಿಸತಕ್ಕದ್ದು.
7. ಅವಶ್ಯಕವಿರುವ ವೆಚ್ಚ ಭರಿಸಿದ ನಂತರ ಬಳಕೆ ಪ್ರಮಾಣ ಪತ್ರವನ್ನು **'ಲೆಕ್ಕಪತ್ರಾಧಿಕಾರಿಗಳು, ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012'.** ಇವರಿಗೆ ಸಲ್ಲಿಸತಕ್ಕದ್ದು.
8. ಸದರಿ ಅನುದಾನದ ಬಿಡುಗಡೆ, ಮರುಪಾವತಿ ಹಾಗೂ ಪೂರ್ಣ ಹೊಣೆಗಾರಿಕೆ ಲೆಕ್ಕಪತ್ರಶಾಖೆಯವರದೇ ಆಗಿರುತ್ತದೆ.

ಈ ಅನುದಾನವನ್ನು ಸಂಬಂಧಿಸಿದ ತರಬೇತಿ ಕಾರ್ಯಕ್ರಮಕ್ಕೆ ಮಾತ್ರ ಬಳಸತಕ್ಕದ್ದು.

30/7/18

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಸರ್ಕಾರದ ಕಾರ್ಯದರ್ಶಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು- ಮಾಹಿತಿಗಾಗಿ.
2. ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ, ದಾವಣಗೆರೆ, ಮೈಸೂರು, ಮಂಗಳೂರು, ಚಿಕ್ಕೋಡಿ, ಕಾರವಾರ ಹಾಗೂ ಗುಲ್ಬರ್ಗಾ ಜಿಲ್ಲೆಗಳಿಗೆ ಮುಂದಿನ ಕ್ರಮಕ್ಕಾಗಿ
3. ನಿರ್ದೇಶಕರ ಆಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
4. ಲೆಕ್ಕ ಪತ್ರ ಅಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
5. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ.